ಅಧ್ಯಕ್ಷರು:- ಮಾನ್ಯ ಕರ್ಕಿಯವರೇ, ನಿಮ್ಮಲ್ಲಿ ಐಕ್ಯತೆ ಇದೆ ಆದರೆ ಸ್ವಲ್ಪ ಶಿಸ್ತಿನ ಕೊರತೆ ಇದೆ ಎಂಬುದು ಗೊತ್ತಾಯಿತು.

ಶ್ರೀ. ಎಂ. ಮಲ್ಲಿಕಾರ್ಜುನ ಖರ್ಗೆ:- ಯಾರಿಗೆ ಹೊಟ್ಟೆ ಕಡಿತ ಇದೆಯೋ ಅವರು ಅಜವಾನ್ ತಿನ್ನಬೇಕೆಂಬ ಗಾದೆ ಮಾತು ಈಗ ನಮಗೆ ಅರ್ಥವಾಯಿತು. ಅದಕ್ಕಾಗಿ ಸಂಬಂಧಪಟ್ಟವರು ಮಾತ್ರ ವೆಲ್‌ಗೆ ಬಂದಿದ್ದಾರೆ. ನೀವು ಎಲ್ಲರಿಗೂ ಬನ್ನಿ ಅಂದರೆ ಹೇಗೆ?

ಶ್ರೀ ಎಸ್. ಸುರೇಶ್ ಕುಮಾರ್:- ಮಾನ್ಯ ಸಭಾಧ್ಯಕ್ಷರೇ, ಮತ್ತೊಮ್ಮೆ ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ, ಸದಸ್ಯರು ತಮ್ಮ ಸ್ಥಾನಗಳಿಗೆ ಹೋಗಬೇಕು ಮತ್ತು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ you use your good officers and ask them. ಅಲ್ಲಿ ನಿಮ್ಮ ಪಕ್ಷದವರೇ ಮೇಯರ್ ಇರುವುದು.

MR. SPEAKER:- Yes. That is a proper approach ತಾವು ಎಕ್ಸಾಮಿನ್ ಮಾಡಿ. ಉಪ-ಮುಖ್ಯಮಂತ್ರಿಯವಾರಾದರೂ ನಮಗೆ ಸಹಾಯ ಮಾಡಬೇಕಾಗಿತ್ತು.

ಶ್ರೀ ಸಿದ್ಧರಾಮಯ್ಯ:- ಮಾನ್ಯ ಅಧ್ಯಕ್ಷರೇ, ನಾನು ತಮಗೆ ಸಹಾಯ ಮಾಡುತ್ತೇನೆ. ಮಾನ್ಯ ಸುರೇಶ್‌ಕುಮಾರ್‌ರವರಿಗೆ ಬೆಂಗಳೂರಲ್ಲಿ ಕಾರ್ಪೊರೇಟರ್ ಆಗಿ ಬಹಳ ಅನುಭವವಿದೆ. ಕಾನೂನಿನ ಅಡಿಯಲ್ಲಿ ಒಂದು ವರ್ಷ ಮುಗಿಯುತ್ತಿದ್ದಾಗಲೇ ಚುನಾವಣೆ ಮಾಡಿ. ಅದನ್ನು ಪ್ರಿಸೈಡ್ ಮಾಡತಕ್ಕಂಥರರು ಅವರು.

ಶ್ರೀ ವಾಟಾಳ್ ನಾಗರಾಜ್:- ಇದು ಬುದ್ದಿವಂತಿಕೆಯಿಂದ ಗೆಲ್ಲುತಕ್ಕಂಥಾದ್ದು. ಈ ಒಂದು ತಂತ್ರವನ್ನು ಅವರು ಮಾಡಿಕೊಂಡಿದ್ದಾರೆ. ಅದರಲ್ಲಿ ಏನೂ ಅನುಮಾನವಿಲ್ಲ.

ಅಧ್ಯಕ್ಷರು:- ಸುರೇಶ್‌ಕುಮಾರ್‌ರವರು Hon'ble Dy.Leader of BJP is very fair. ಅವರು ಹೇಳಿದರು " use your good offices." I would request the Government to kindly examine that request. ಆದ್ದರಿಂದ ಮಾನ್ಯ ಸದಸ್ಯರುಗಳು ತಮ್ಮ ಸ್ಥಾನಕ್ಕೆ ಹಿಂದಿರುಗಬೇಕು. ಮಾಧುಸ್ವಾಮಿಯವರು ಪ್ರಸ್ತಾಪ ಮಾಡಿ. ಕ್ಷಮಿಸಿ ಮೊನ್ನೆ ತಾವು ಭಾಷಣ ಮಾಡುವಾಗಲೂ ಕೂಡ ನಿಮ್ಮನ್ನು ಏಳಿಸುವುದು, ಕೂಡಿಸುವುದು ಆಯಿತು.....

(ಎ) ಹೇಮಾವತಿ ನಾಲೆಯಿಂದ ತುಮಕೂರು ಹಾಗೂ ತಿಪಟೂರಿಗೆ ನೀರು ಸರಬರಾಜು.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):- ಸನ್ಮಾನ್ಯ ಅಧ್ಯಕ್ಷರೇ, ಹೇಮಾವತಿ ನಾಲೆಯಿಂದ ತಿಪಟೂರು, ಅರಸೀಕೆರೆ, ತುಮಕೂರುಗಳಿಗೆ ಕುಡಿಯುವ ನೀರನ್ನು ಕೂಡಿ ಕೊಡಬೇಕಾಗಿರುತ್ತದೆ. ಕಳೆದ ಸಾರಿ ಗೋರೂರಿನಲ್ಲಿ ನಡೆದ ಐಸಿಸಿ ಸಮಿತಿಯಲ್ಲಿ ಫೆಬ್ರವರಿಯಿಂದ ಏಪ್ರಿಲ್ ವರೆಗೆ ನಾಲೆಯಲ್ಲಿ ನೀರು ಬಿಡುತ್ತೇವೆ. ಆಗ ಈಚನೂರು ಮತ್ತು ಬುಗುಟನಹಳ್ಳಿ ಕೆರೆಗಳು ತುಂಬಬೇಕು ಎಂದು ನಿರ್ಣಯವಾಗಿತ್ತು. ಐದು ಟಿಎಂಸಿ ನೀರನ್ನು ಅದಕ್ಕಾಗಿಯೇ ಮೀಸಲಟ್ಟಿತ್ತು. ಆದರೆ ಊವರೆವಿಗೂ ಆ ನಾಲೆಯಲ್ಲಿ ನೀರು ಬಿಡಲಿಲ್ಲ. ಈಚನೂರು ಕೆರೆಯಲ್ಲಿ ಈಗಾಗಲೇ ನೀರು ಖಾಲಿಯಾಗಿದೆ. ತಿಪಟೂರು ಮತ್ತು ಅರಸೀಕೆರೆಗೆ ನೀರು ತೆಗೆದುಕೊಳ್ಳ ಬೇಕಾಗಿದ್ದು ಜನರು ಆತಂಕಕ್ಕೊಳಗಾಗಿದ್ದಾರೆ. ಬುಗುಟನಹಳ್ಳಿ ಕೆರೆಯಲ್ಲಿಯೂ ಕೂಡ ಸ್ವಲ್ಪ ಪ್ರಮಾಣದಲ್ಲಿ ನೀರು ಉಳಿದಿದೆ. ಆ ನೀರನ್ನು ನೀವೇನಾದರೂ ಕೊಡಲು ಪ್ರಾರಂಭಮಾಡಿದ್ದರೆ ಅದು ಕೂಡ ಸಾಕಾಗುತ್ತಿರಲಿಲ್ಲ. ಎಂದು ಕಡೆ ಬೇಸಿಗೆ ಕಾಲ, ಇನ್ನೊಂದು

ಕಡೆ ಐಸಿಸಿ ಸಭೆ ನಿರ್ಣಯವಾಗಿದ್ದರೂ ಕೂಡ ಫೆಬ್ರುವರಿಯಲ್ಲಾಗಲೀ, ಮಾರ್ಚ್‌ನಲ್ಲಾಗಲೀ ಆ ಹೆಚ್‌ಎಲ್‌ಬಿಸಿ ತುಮಕೂರಿನಲ್ಲಿ ನೀರನ್ನು ಹರಿಸಲೇ ಇಲ್ಲ. ತಾವುಗಳು ನಾಲೆಯಲ್ಲಿ ನೀರು ಹರಿಸಿ ಈಚನೂರು ಕೆರೆಯನ್ನು ತುಂಬುತ್ತೀರಾ? ಬುಗುಟನಹಳ್ಳಿ ಕೆರೆಯನ್ನು ತುಂಬುತ್ತೀರಾ ಅಥವಾ ಹೀಗೆಯೇ ತಿಪಟೂರು, ಅರಸೀಕೆರೆ, ತುಮಕೂರುಗಳಿಗೆ ಈ ನೀರಿನ ಆತಂಕವನ್ನು ಮುಂದುವರಿಸಿಕೊಂಡು ಹೋಗಲು ತಾವುಗಳು ಸುಮ್ಮನೆ ಕುಳಿತುಕೊಂಡು ನೋಡುತ್ತೀರಾ ಎಂದು ಹೇಳಿ ಪ್ರಸ್ತಾವ ಮಾಡಲು ಬಯಸುತ್ತೇನೆ. ಈಗ ತಿಪಟೂರಿನಲ್ಲಿ ಬಹಳ ಕಷ್ಟದ ಪರಿಸ್ಥಿತಿ ಇದೆ. ತತ್‌ಕ್ಷಣ ಆ ಕೆರೆಗೆ ನೀರು ತುಂಬಿದರೆ ಅದನ್ನು ಪಂಪ್ ಮಾಡಲು ಮೂರು ತಿಂಗಳು ತೆಗೆದುಕೊಳ್ಳುತ್ತದೆ. ನಾಳೆಯಿಂದ ನೀರು ಹೊರಟ ತತ್‌ಕ್ಷಣ ಪಂಪ್ ಮಾಡಿದರೆ ಕೆರೆ ತುಂಬಲು ಮೂರು ತಿಂಗಳು ಬೇಕಾಗುತ್ತದೆ. ಆದ್ದರಿಂದ ಇವೊತ್ತು ಬಿಟ್ಟು ಇನ್ನು ಮೂರು ತಿಂಗಳೊಳಗಾಗಿಯಾದರೂ ಆ ಕೆರೆಗೆ ನೀರು ಹರಿಸುತ್ತೀರಾ ಎಂದು ಕೇಳಬಯಸುತ್ತೇನೆ.

ಶ್ರೀ ಎಂ.ಪಿ. ನಾಣಯ್ಯ:- ಮಾನ್ಯ ಅಧ್ಯಕ್ಷರೇ, ಇದು ನೀರಾವರಿ ಮತ್ತು ನಗರಾಭಿವೃದ್ಧಿ ಇಲಾಖೆಗಳಿಗೆ ಸಂಬಂಧಪಟ್ಟ ವಿಷಯ. ಆದ್ದರಿಂದ ಇದಕ್ಕೆ ಸಂಬಂಧಪಟ್ಟ ಇಲಾಖೆಗಳಿಂದ ವರದಿಯನ್ನು ತರಿಸಿ ಸೋಮವಾರದಂದು ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಮಾನ್ಯ ಅಧ್ಯಕ್ಷರೇ, ನಾನು ಹುಬ್ಬಳ್ಳಿ ಗೋಲಿಬಾರ್ ವಿಷಯವನ್ನು ಪ್ರಸ್ತಾಪ ಮಾಡಲು ಅವಕಾಶ ಕೋರಿದ್ದೆ.

ಅಧ್ಯಕ್ಷರು:- ಅದೇ ವಿಷಯದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಅವಕಾಶ ಕೋರಿರುವುದರಿಂದ ಮೊದಲು ಅವರು ಪ್ರಸ್ತಾಪ ಮಾಡುತ್ತಾರೆ. ಅನಂತರ ತಾವು ಪ್ರಸ್ತಾಪಿಸಬಹುದು. The first priority will go to the Leader of opposition. He has also sought permission. ಅವರದ್ದು ಆದ ಮೇಲೆ ತಮಗೆ ಅವಕಾಶ ಕೊಡುತ್ತೇನೆ. ವಾಟಾಳ್‌ರವರಿಗೂ ಕೂಡ ಆ ಮೇಲೆ ಅವಕಾಶ ಕೊಡುತ್ತೇನೆ.

(ಎ) ಹುಬ್ಬಳ್ಳಿಯಲ್ಲಿ 17.3.98ರಂದು ಹೋಳಿ ಹಬ್ಬದ ವಿಚಾರಣೆಯಲ್ಲಿ ನಡೆದ ಘಟನೆ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- (ವಿರೋಧ ಪಕ್ಷದ ನಾಯಕರು) ಸನ್ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿಯಲ್ಲಿ ದಿನಾಂಕ 17-3-98ರಂದು ಸುಮಾರು ಎರಡೂವರೆ ಗಂಟೆಗೆ ಹೋಳಿ ಹಬ್ಬವನ್ನು ಆಚರಣೆ ಮಾಡಿ ಮೆರವಣಿಗೆಯನ್ನು ತೆಗೆದುಕೊಂಡು ಹೋಗುವಾಗ ಅಲ್ಲಿ ನಡೆದಂಥ ಘಟನೆ ಮತ್ತು ಆ ಎಂದು ಮೆರವಣಿಗೆಯ ಮೇಲೆ ಕಲ್ಲೆಸೆದರು ಎಂಬ ಕಾರಣದಿಂದ ಹುಬ್ಬಳ್ಳಿಯಲ್ಲಿರತಕ್ಕಂಥ ಗಾಂಧಿಮಾರ್ಕೆಟ್‌ನಲ್ಲಿ ಇರತಕ್ಕಂಥ 25 ಅಂಗಡಿಗಳು ಸುಟ್ಟು ಹೋಗಿದೆ. ಮತ್ತು ಹುಬ್ಬಳ್ಳಿಯ ಸೆನ್ಸಿಟೀವ್ ಸ್ಥಳಗಳಾದಂಥ ಮಲ್ಲಾಬಾಡ, ಕಮರಿಪೇಟೆ, ಡಾಕಪ್ಪ ಸರ್ಕಲ್, ಕೌಲ್‌ಪೇಟೆ, ಈ ಎಲ್ಲಾ ಭಾಗಗಳಿಂದ ಹೋಳಿ ಮೆರವಣಿಗೆಯು ಹೊರಟು ಡಾಕಪ್ಪ ಸರ್ಕಲ್‌ಗೆ ಬಂದಾಗ ಈ ಘಟನೆಯು ನಡೆಯಿತು ಎಂಬ ಬಗ್ಗೆ ನಮಗೆ ಇವೊತ್ತು ಒಂದು ವರದಿಯು ಬಂದಿದೆ. ಪತ್ರಿಕೆಗಳಲ್ಲಿಯೂ ಕೂಡ ನಾವೆಲ್ಲರೂ ಓದಿದ್ದೇವೆ. ಈ ಒಂದು ಘಟನೆಯಿಂದ ಪುನಃ ಹುಬ್ಬಳ್ಳಿಯಲ್ಲಿ ಟೆನ್ಸ್ ಸಿಚ್ಯುವೇಶನ್ ಇದೆ. ಈ ವಾತಾವರಣ ಅಲ್ಲಿ ಪದೇ ಪದೇ ಆಗುತ್ತಾ ಇದೆ. ಇತ್ತೀಚೆಗೆ 2-3ವರ್ಷಗಳಿಂದ ಅಲ್ಲಿ ಶಾಂತಿ ಇತ್ತು. ಮತ್ತು ಪುನಃ ಹೋಳಿ ಸಂದರ್ಭದಲ್ಲಿ